**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ 229 ಗ್ರಾಪಂಅ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:30.08.2022.

**ಇಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

ಸಹಾಯಕ ಕಮೀಷನರವರ ಕಛೇರಿ
ಕೋಲಾರ ಉಪ ವಿಭಾಗ
ಕೋಲಾರ.

**ಮಾನ್ಯರೇ,**

**ವಿಷಯ:** ಕೋಲಾರ ತಾಲ್ಲೂಕು, ಬೆಳಮಾರನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಬಿ.ಎ. ಚಂದ್ರಶೇಖರ್‌ರವರ ವಿರುದ್ಧ ಬೆಳಮಾರನಹಳ್ಳಿ ಸದಸ್ಯರು 2ನೇ ಬಾರಿ ಅವಿಶ್ವಾಸ ಅರ್ಜಿಯನ್ನು ನೀಡಿರುವ ಸಂಬಂಧ ನಿರ್ದೇಶನ ನೀಡುವ ಬಗ್ಗೆ.

**ಉಲ್ಲೇಖ:** ತಮ್ಮ ಕಛೇರಿ ಪತ್ರ ಸಂಖ್ಯೆ:ಇಎಲ್‌ಎಸ್/ಸಿಆರ್/71/2022-23,
ದಿನಾಂಕ: 19.08.2022.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ಪ್ರಸ್ತಾಪಿಸಿರುವ ತಮ್ಮ ಪತ್ರವನ್ನು ಸರ್ಕಾರ ಪರಿಶೀಲಿಸಿರುತ್ತದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ-1993ರ ಪ್ರಕರಣ 49ರಡಿಯ ಮತ್ತೂ ಪರಂತುವಿನಡಿಯ ಉಪಬಂಧದಲ್ಲಿ ಈ ಕೆಳಗಿನಂತಿರುತ್ತದೆ:-

> **"ಯಾವೊಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಗ್ರಾಮ ಪಂಚಾಯಿತಿಯು ಪರಿಶೀಲಿಸಿ ಅದನ್ನು ಅಂಗೀಕರಿಸದಿರುವಲ್ಲಿ, ಅದೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸಂಬಂಧದಲ್ಲಿ ಗ್ರಾಮ ಪಂಚಾಯಿತಿಯು ತನ್ನ ನಿರ್ಣಯವನ್ನು ನೀಡಿದ ದಿನಾಂಕದಿಂದ (ಆರು ತಿಂಗಳ ಒಳಗೆ) ಅದೇ ರೀತಿಯ ನಿರ್ಣಯದ ನೋಟೀಸನ್ನು ನೀಡತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ."**

ಆದರೆ, ಬೆಳಮಾರನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ವಿರುದ್ಧ ದಿನಾಂಕ:30/05/2022ರಂದು ಅವಿಶ್ವಾಸ ನಿರ್ಣಯ ಮಂಡನೆಗೆ ಸಲ್ಲಿಸಿದ್ದ ಮನವಿಯ ಮೇರೆಗೆ ದಿನಾಂಕ:22/06/2022ರಂದು ಸಹಾಯಕ್ತ ಆಯುಕ್ತರು, ನಿಗದಿಗೊಳಿಸಿದ್ದ ಸಭೆಯಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ಗ್ರಾಮ ಪಂಚಾಯತಿಯು ಪರಿಶೀಲಿಸಿ, ಅದನ್ನು ಅಂಗೀಕರಿಸದಿರುವುದಿಲ್ಲ. ಸದರಿ ಸಭೆಗೆ ಯಾವುದೇ ಸದಸ್ಯರು ಸಭೆಗೆ ಹಾಜರಿಲ್ಲದ ಕಾರಣ ಸಹಾಯಕ ಆಯುಕ್ತರು, ಸದರಿ ಸಭೆಯನ್ನು ವಿಸರ್ಜಿಸಿರುತ್ತಾರೆ.

ಆದಕಾರಣ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ-1993ರ ಪ್ರಕರಣ 49ರಡಿಯ ಕಲಂನಲ್ಲಿ ತಿಳಿಸಿರುವ ಪ್ರಕಾರ 2ನೇ ಬಾರಿ ಅವಿಶ್ವಾಸ ನಿರ್ಣಯ ಮಂಡನೆಗೆ ಕಾನೂನು ರೀತಿ ಕ್ರಮವಹಿಸಬೇಕಾಗಿರುತ್ತದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಶಿವಕುಮಾರ್) 30/08/22
ಪೀಠಾಧಿಕಾರಿ(ಗ್ರಾಂ.ಪ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:-

(1) ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆಂಪೇಗೌಡ ರಸ್ತೆ, ಗಾಂಧಿನಗರ, ಬೆಂಗಳೂರು ರವರಿಗೆ ಮಾಹಿತಿಗಾಗಿ.

(2) ಮುಖ್ಯ ಕಾರ್ಯನಿರ್ವಹಕಾಧಿಕಾರಿ, ಜಿಲ್ಲಾ ಪಂಚಾಯತಿ ಕೋಲಾರ, ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

(3) ಕಾರ್ಯನಿರ್ವಹಕಾಧಿಕಾರಿ, ಕೋಲಾರ ತಾಲ್ಲೂಕು ಪಂಚಾಯತಿ, ಕೋಲಾರ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

(4) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೆಳಮಾರನಹಳ್ಳಿ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.

(5) ರಾಜ್ಯದ ಎಲ್ಲಾ ಸಹಾಯಕ ಆಯುಕ್ತರು, ಕಂದಾಯ ಉಪ ವಿಭಾಗ ಇವರಿಗೆ ಮಾಹಿತಿಗಾಗಿ ಈ ಪ್ರತಿಯನ್ನು ಕಳುಹಿಸಲಾಗಿದೆ.

(6) ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ, ಪಂಚಾಯತ್ ರಾಜ್ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.

(7) ಗಣಕೋಶ, ಇಲಾಖೆಯ ವೈಬ್‌ಸೈಟಿನಲ್ಲಿ ಆಳವಡಿಸಲು ಕೋರಿದೆ.